Drinking Water Wells in Tumkur District.

Q.—154. Sri K. P. REVANNASIDDAPPA (Tiptur).—

Will the Government be pleased to state :—

(*a*) the number of drinking water wells taken up during the III Five Year Plan period in Tumkur District;

(*b*) the number of villages that are without drinking water wells in the above district;

(*c*) the number of wells that are in incomplete and from what date;

(*d*) the reason for their incompletion;

(*e*) what further action has been taken by Government to complete the incomplete wells without any further delay ?

A.—Sri Y. RAMACHANDRA (Deputy Minister for Municipal Administration).—

(*a*) 350.

(*b*) 444.

(*c*) 238.

(*d*) Non-availability of contractors to work with the old schedule of rates.

(*e*) Action is being taken to complete the wells by revising the rates of original estimates sanctioned and pursuing the contractors through local institutions and Taluk Boards.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ತಿಪಟೂರಿನಲ್ಲಿ ಕುಡಿಯುವ ನೀರಿನ ಬಾವಿಯ ಕೆಲಸ ವನ್ನು ನಿಲ್ಲಿಸಿ ಎಷ್ಟು ವರ್ಷವಾಗಿದೆ ?

ಅಧ್ಯಕ್ಷರು.—ತಿಪಟೂರು ಎಂದರೆ ತಾಲ್ಲೂಕೊ ಅಥವಾ ಜಿಲ್ಲೆಯೊ ?

ಶ್ರೀ ವೈ. ರಾಮಚಂದ್ರ.—ತಮ್ಮ ಜಿಲ್ಲೆಯಲ್ಲಿ ಇದುವರೆಗೆ ಕೆಲಸ ಪೂರ್ತಿ ಮಾಡದೆ ಇರುವ ಬಾವಿಗಳೆಷ್ಟಿವೆಂದು ತಾವು ಕೇಳಿದ್ದೀರಿ. ಈಗ ತಾಲ್ಲೂಕಿನ ವಿಚಾರ ಕೇಳುತ್ತಿದ್ದೀರಿ, ಅದರೂ ಹೇಳುತ್ತೇನೆ. ತಿಪಟೂರು ತಾಲ್ಲೂಕಿನಲ್ಲಿ 16 ಬಾವಿ ಪೂರ್ತಿಯಾಗಿದೆ. 39 ಹಳ್ಳಿಗಳಲ್ಲಿ ಆಗಿಲ್ಲ. ಇನ್ನು 14 ಆಗುವುದರಲ್ಲಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ತೆಗೆದ ಬಾವಿಗಳಲ್ಲಿ ನೀರಿಲ್ಲದ ಬಾವಿಗಳ ಸಂಖ್ಯೆ ಎಷ್ಟು ?

ಶ್ರೀ ವೈ. ರಾಮಚಂದ್ರ.—ಅದಕ್ಕೆ ಬೇರೆ ಪ್ರಶ್ನೆ ಕೇಳಿ, ಹೇಳುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಬಾವಿ ಶುರು ಮಾಡಿರುವುದು ಯಾವಾಗ ? 15 ವರ್ಷ ವಾದರೂ ಪೂರ್ತಿಯಾಗದಿರುವುದಕ್ಕೆ ಕಾರಣವೇನು ?

ಶ್ರೀ ವೈ. ರಾಮಚಂದ್ರ.—ಇದೀ ಜಿಲ್ಲೆಗೆ ಸೇರಿದ ವಿಚಾರವನ್ನು ಹೇಳಬೇಕಾದರೆ ಬಹಳ ಜಾಸ್ತಿ ಸಮಯಬೇಕಾಗುತ್ತದೆ. ಈ ವಿಚಾರದ ಮಾಹತಿಯನ್ನು ಸಭೆಯ ಮುಂದೆ ಇಡರಾಗುವುದು. ತಾವು ನೋಡಬಹುದು.

ಶ್ರೀ ಬಿ. ಬೈರಪ್ಪಜಿ.—ಸ್ವಾಮಿ, ಬಾವಿಗಳನ್ನು ಪೂರ್ಣ ಮಾಡಿರುವುದಕ್ಕೆ ಕಾರಣ 15 ವರ್ಷಗಳಲ್ಲಿ ಮುಂಜೂರು ಮಾಡಿದಂತಹ ಅಂದಾಜು ಇನ್ನೂ ರಿವೈಸ್ ಮಾಡದೆ, ಕಂಟ್ರಾಕ್ಟರುಗಳಿಗೆ ಒತ್ತಾಯ ಮಾಡುವುದರಿಂದ ಅವರು ತಪ್ಪಿಸಿಕೊಳ್ಳುತ್ತಾರೆ. ಅದರಿಂದ ಈ ರೇಟ್‌ಗಳನ್ನು ಈಗಿನ ಕರೆಂಟ್ ರೇಟಿಗೆ ತಂದು ಬಾವಿಗಳನ್ನು ಆದಷ್ಟು ಬೇಗ ಮಾಡುವುದಕ್ಕೆ ಅನುಕೂಲ ಮಾಡುತ್ತೀರಾ ?

ಶ್ರೀ ವೈ. ರಾಮಚಂದ್ರ.—15 ವರ್ಷದಿಂದ ರಿವೈಸ್ ಮಾಡಲಲ್ಲ ಎನ್ನುವುದು ಸರಿಯಲ್ಲ. ಪ್ರತಿ ವರ್ಷ ಏಪ್ರಿಲ್‌ನಲ್ಲಿ ರಿವೈಸ್ ಮಾಡುತ್ತೇವೆ. ಈ ವರ್ಷದ್ದು ಕೂಡ ರಿವೈಸ್ ಮಾಡುವುದಕ್ಕೆ ತೆಗೆದುಕೊಂಡಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಮಾನ್ಯ ಸಚಿವರು ಹೇಳಿದರು ವರ್ಷೇ ವರ್ಷೇ ರಿವೈಸ್ ಮಾಡುತ್ತಾರೆ ಎಂದು. ನನಗೆ ತಿಳಿದಮಟ್ಟಿಗೆ ಹಾಗೆ ರಿವೈಸ್ ಮಾಡುತ್ತಾ ಇಲ್ಲ. ಹತ್ತು ವರ್ಷದ ಹಿಂದೆ ಮಂಜೂರು ಆದರೂ ಕೂಡ ಅದೇ ರೇಟಿಗೆ ಈಗ ಕೆಲಸಮಾಡಿ ಎಂದು ಒತ್ತಾಯಮಾಡುತ್ತಾರೆ. ಕರೆಂಟ್ ಷೆಡ್ಯೂರ್ ರೇಟ್ ಕೊಡುತ್ತಾ ಇಲ್ಲ. ಅದನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಅಧ್ಯಕ್ಷರು.—ಅವರು ಇದಕ್ಕೆ ಸರಿಯಾದ ಜವಾಬು ಕೊಟ್ಟಿದ್ದಾರೆ.

Sri K. LAKKAPPA.—The Hon'ble Minister said that 238 wells are not completed. Since how long these wells are not completed ? Why steps have not been taken to complete them?

ಶ್ರೀ ವೈ. ರಾಮಚಂದ್ರ.—ಈಗ 172 ಮಾತ್ರ ಒಂದು ವರ್ಷಕ್ಕೆ ಮೇಲ್ಪಟ್ಟದ್ದು ಉಳಿದು ದೆಲ್ಲಾ ಒಂದು ವರ್ಷದೊಳಗಿದ್ದದ್ದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ಇದು ಎಷ್ಟು ಸಮಯದಿಂದ ಬಾಕಿ ಇದೆ ?

ಶ್ರೀ ವೈ. ರಾಮಚಂದ್ರ.—ನಾನು ಮೊದಲೇ ಹೇಳಿದೆ. ಮಾಹಿತಿ ನಂತರ ಒದಗಿಸಲಾಗುವುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸುಮಾರು 15 ವರ್ಷದಿಂದ ಈ ಕೆಲಸ ನಿಂತಿರುವುದರಿಂದ ಈ ಬಾವಿ ಕುಸಿದು ಎಲ್ಲಾ ಊರಿನವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದರಿಂದ ಅನೇಕ ದನಕರುಗಳು, ಚಿಕ್ಕಮಕ್ಕಳು ಬಿದ್ದು ಪ್ರಾಣ ಹಾನಿಯಾಗುವುದರಿಂದ ಈಗಲಾದರೂ ಸರ್ಕಾರದವರು ತಕ್ಷಣ ಇದನ್ನು ಪೂರ್ತಿ ಮಾಡುವುದಕ್ಕೆ ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ವೈ. ರಾಮಚಂದ್ರ.—ಸರ್ಕಾರದವರು ಎಲ್ಲಾ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಜಾಗ್ರತೆ ಆಗಬೇಕೆಂದು ಸ್ಥಳದ ಅಧಿಕಾರಿಗಳು ಗ್ರಾಮ ಪಂಚಾಯ್ತಿಯವರಿಗೆ ಮತ್ತು ಬೇರೆ ಸಂಸ್ಥೆಯವರನ್ನು ಬರಮಾಡಿಕೊಂಡು ಅವರಿಗೆ ಕೆಲಸವನ್ನು ವಹಿಸಿಕೊಡುತ್ತಿದ್ದಾರೆ.

Sri G. V. GOWDA.—There are nearly more than 7500 villages where there is no facility for drinking water. May I know whether the Government have got any programme to give drinking water wells to these villages and if so, within what period ?

ಶ್ರೀ ವೈ. ರಾಮಚಂದ್ರ.—ಸಾಕಷ್ಟು ಕಾರ್ಯಕ್ರಮ ನಾವು ತೆಗೆದುಕೊಂಡಿದ್ದೇವೆ. ಈ ವರ್ಷ ಸುಮಾರು 51 ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿನ ಬಾವಿಗಳಿಗೋಸ್ಕರ ಬಿಡುಗಡೆ ಮಾಡಿದ್ದೇವೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಸ್ವಾಮಿ, ಕುಡಿಯುವ ನೀರು ಹಳ್ಳಿಗಲ್ಲಿ ಅಳವಾಗಿ ಅಗೆದರೂ ಸಿಕ್ಕದೆ ತೊಂದರೆಯಾಗಿದೆ. ನಾವು ಒಂದು ಮಾಡುತ್ತೇವೆ ನೀವು ಒಂದು ಮಾಡಿ ಎಂದು ಪಂಚಾಯ್ತಿಯವರಿಗೆ ಹೇಳಿದ್ದಾರೆ. ಒಂದೊಂದು ಪಂಚಾಯ್ತಿಗೆ 8—9 ಹಳ್ಳಿಗಳಿವೆ. ಇದರಿಂದ ತುಂಬಾ ತೊಂದರೆಯಾಗಿದೆ. ಆದ್ದರಿಂದ ತಕ್ಷಣ ಬಾವಿಗಳನ್ನು ಆಳ ಮಾಡುವುದಕ್ಕೆ ಸರ್ಕಾರದವರು ನಿಗಾ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೈ. ರಾಮಚಂದ್ರ.—ಈ ವಿಚಾರದಲ್ಲಿ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ಈಗ ಕೆಲಸವಾಗದೆ ನಿಂತಿರುವ ಕೆಲಸಗಳನ್ನು ತಕ್ಷಣ ತೆಗೆದುಕೊಳ್ಳುವಂತೆ ಲೋಕರ್ ಆಫೀಸರ್ಸಿಗೆ, ಪಂಚಾಯಿತಿಗಳಿಗೆ ತಕ್ಷಣ ಆದೇಶ ಕೊಡುತ್ತೀರಾ ?

ಶ್ರೀ ವೈ. ರಾಮಚಂದ್ರ.—ನ ನು ಉತ್ತರದಲ್ಲಿ ಹೇಳಿದ್ದೇನೆ. ಇದನ್ನು ಆದಷ್ಟು ಬೇಗ ಮಾಡುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆದಷ್ಟು ಬೇಗ ಎಂದು ತಾವು ಹೇಳುತ್ತೀರಿ. ಆದಷ್ಟು ಬೇಗ ಎಂದರೆ ಅದಕ್ಕೆ ಕಾಲ ಮಿತಿ ಏನು ಸ್ವಾಮಿ ?

ಶ್ರೀ ವೈ. ರಾಮಚಂದ್ರ.—ಅದು ನನಗೆ ಗೊತ್ತು. ಬಹಳ ಜಾಗ್ರತೆ ಮಾಡುತ್ತೇವೆ.